ವಿಷಯ :– ದಕ್ಷಿಣ ಕನ್ನಡ ಜಿಲ್ಲೆ ಮಂಗಳೂರು ತಾಲ್ಲೂಕಿನಲ್ಲಿ ವಿಧವಾ ಮಾಶಾಸನ ವಿತರಣೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 695 (1048)

ಶ್ರೀ ಬಿ. ಎಂ. ಇದಿನಬ್ಬ (ಉಳ್ಳಾಲ) :– ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಮಂಗಳೂರು ತಾಲ್ಲೂಕಿನಲ್ಲಿ ವಿಧವಾ ಮಾಶಾಸನ, ವೃದ್ಧಾಪ್ಯ ವೇತನ, ಅಂಗವಿಕಲರ ವೇತನ 1987-88, 1988-89, 1989-90ರಲ್ಲಿ ಎಷ್ಟು ಜನರಿಗೆ ಕೊಡಲಾಗಿದೆ. (ಪ್ರತ್ಯಪ್ರತ್ಯೇಕ ವಿವರ ನೀಡುವುದು)

ಆ) ಇನ್ನು ಕೊಡಲು ಬಾಕಿ ಇರುವ ಅರ್ಜಿಗಳೆಷ್ಟು ?

ಇ) ಇದರ ವಿಲೇವಾರಿ ಯಾವಾಗ ಪೂರ್ಣಗೊಳ್ಳುತ್ತದೆ ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಕಂದಾಯ ಸಚಿವರು) :–

ಅ) ಮಾಶಾಸನ ನೀಡಿರುವ ವರ್ಷವಾರು ವಿವರಣೆಗಳು :–

| ವರ್ಷ | ವೃದ್ಧಾಪ್ಯ ವೇತನ | ಅಂಗವಿಕಲರ ವೇತನ | ವಿಧವಾ ಮಾಶಾಸನ |
|---|---|---|---|
| 1987–88 | 76 | 64 | 819 |
| 1988–89 | 185 | 166 | 868 |
| 1989–90 | 78 | 85 | 259 |

ಆ) ವೃದ್ಧಾಪ್ಯ ವೇತನ 43
ಅಂಗವಿಕಲರ ವೇತನ 77
ವಿಧವಾ ಮಾಶಾಸನ 35

ಇ) ಬಾಕಿ ಇರುವ ಎಲ್ಲಾ ಅರ್ಜಿಗಳನ್ನು ಆದಷ್ಟು ಬೇಗ ವಿಲೇವಾರಿ ಮಾಡಲು ಸಂಬಂಧಪಟ್ಟ ಅಧಿಕಾರಿಗಳಿಗೆ ಈಗಾಗಲೇ ಸೂಚಿಸಲಾಗಿದೆ.

ವಿಷಯ : ಕನ್ನಡ ವೃತ್ತಿರಂಗ ಭೂಮಿಯನ್ನು ಪುನರುಜ್ಜೀವನಗೊಳಿಸುವುದು.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 697 (1074)

ಶ್ರೀ ವಾಟಾಳ್ ನಾಗರಾಜ್ :– (ಚಾಮರಾಜನಗರ) :– ಮಾನ್ಯ ಯುವಜನ ಸೇವಾ ಕ್ರೀಡಾ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ನಶಿಸಿ ಹೋಗುತ್ತಿರುವ ಕನ್ನಡ ವೃತ್ತಿ ರಂಗಭೂಮಿಯನ್ನು ಪುನರುಜ್ಜೀವನ ಗೊಳಿಸಲು ಸರ್ಕಾರ ನಿರ್ಧರಿಸಿದೆಯೆ ?

ಆ) ಕನ್ನಡ ಚಲನ ಚಿತ್ರಗಳಿಗೆ ನೀಡುತ್ತಿರುವಂತೆ ವೃತ್ತಿ ರಂಗಭೂಮಿ ಬೆಳವಣಿಗೆ ಹಿತದೃಷ್ಟಿಯಿಂದ ಪ್ರತಿ ದುಡಿದ ನಾಟಕ ಕಂಪನಿಗಳಿಗೆ ತಲಾ 5ಲಕ್ಷ ರೂ.ಗಳಂತೆ ಸಹಾಯ ಧನ ಕೊಡುವ ಬಗ್ಗೆ ಯೋಚಿಸಲಾಗಿದೆಯೇ

ಇ) ವೃತ್ತಿ ರಂಗಭೂಮಿಯ ಸಮಗ್ರ ನಟನಟಿಯರಿಗೆ ಒಂದೇ ಸಾರಿ ಮಾಶಾಸನವನ್ನು ಸರಕಾರ ನೀಡಬಾರದೇಕೆ ?

ಈ) ಪ್ರತಿ ತಾಲ್ಲೂಕಿಗೂ ಒಂದೊಂದು ಸುಸಜ್ಜಿತ ರಂಗಮಂದಿರವನ್ನು ಕಟ್ಟಿಸಲು ಸರ್ಕಾರ ನಿರ್ಧಾರ ಕೈಗೊಳ್ಳಲಿದೆಯೇ ?